ಸಾಕ್ಷಿಯನ್ನು ದಿನಾಂಕ 07-08-2023 ರಂದು ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ ಸಿ ಆರ್ ವಕೀಲರಿಂದಃ</u>**

ನಾನು ದಾವಣಗೆರೆಯಲ್ಲಿ ವಾಸವಿದ್ದೇನೆ. ನಾನು ಹುಬ್ಬಳ್ಳಿಯಲ್ಲಿ 1962 ರಿಂದ 2019 ರವರೆಗೆ ವಾಸವಾಗಿದ್ದೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಬರೆಯಲು 2 ನೇ ತಾರೀಕಿನಂದು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇನೆ. 2 ನೇ ತಾರೀಕಿನ ಸಾಯಂಕಾಲದಂದು ಆ ರೀತಿ ಮಾಹಿತಿಯನ್ನು ನೀಡಿದ್ದೇನೆ.

ಈ ಕೇಸಿನ ನಂಬರ ಹೇಳಲು ಗೊತ್ತಿಲ್ಲ. ಈ ಕೇಸಿನಲ್ಲಿ ವಾದಿ ಯಾರು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಈ ಕೇಸಿನಲ್ಲಿ ಯಾರೆಲ್ಲ ಪಕ್ಷಗಾರರು ಇದ್ದಾರೆ ಎಂದು ಕೇಳಿದರೆ ಬೆನಕಟ್ಟಿ ವಕೀಲರಿಗೆ ಸಂಬಂಧಪಟ್ಟವರು ಇದ್ದಾರೆ ಎಂದು ನುಡಿಯುತ್ತೇನೆ. ಈ ದಾವೆಯಲ್ಲಿ ಬೆನಕಟ್ಟಿರವರ ವಿರುದ್ಧ ಏನು ಪರಿಹಾರವನ್ನು ಕೇಳಿ ವಾದಿಯರು ಕೇಳಿದ್ದಾರೆ ಎಂದರೆ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಹಿಂದೆ ನಾವು ಅಧ್ಯಾಪಕರ ನಗರ ಕೋ ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯರಾಗಿದ್ದೇವು ಹಾಗೂ ಆ ಬಗ್ಗೆ ಮಾತ್ರ ಮಾಹಿತಿ ಇದೆ. ಆ ಬಗ್ಗೆ ಈ ದಾವೆಗೆ ಸಂಬಂಧಪಟ್ಟಂತೆ ಏನು ಮಾಹಿತಿ ಇದೆ ಎಂದರೆ ಸದರಿ ಸೊಸೈಟಿಯವರ ಬೆಕಟ್ಟಿರವರೊಂದಿಗೆ 4 ಎಕರೆ ಜಮೀನು ಕುರಿತಂತೆ ಅಗ್ರೀಮೆಂಟ್ ಮಾಡಿಕೊಂಡಿದ್ದರು ಎಂದು ನುಡಿಯುತ್ತೇನೆ. ಯಾವ ಸರ್ವೆ ನಂಬರ ಬಗ್ಗೆ ಅಗ್ರೀಮೆಂಟ್ ಆಗಿದ್ದು ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ರೇಣುಕಾ ನಗರ ಸಮೀಪ ಸೈಟುಗಳು ಇವೆ ಹಾಗೂ ಆ ಜಮೀನು ಬಗ್ಗೆ ಅಗ್ರೀಮೆಂಟ್ ಆಗಿದೆ. ಆ ಅಗ್ರೀಮೆಂಟ್‌ನ್ನು ಯಾವ ಬೆನಕಟ್ಟಿರವರು ಮಾಡಿಕೊಟ್ಟಿದ್ದರು ಎಂದು ಕೇಳಿದರೆ ವಕೀಲರಾಗಿದ್ದ ಬೆನಕಟ್ಟಿವರು ಮಾಡಿಕೊಟ್ಟಿದ್ದರು ಎಂದು ನುಡಿಯುತ್ತೇನೆ. 1994 ಲ್ಲಿ ಆ ಅಗ್ರೀಮೆಂಟ್ ಆಗಿತ್ತು. 1985 ದಿಂದಲೂ ನಾನು ಅಧ್ಯಾಪಕರ ನಗರಹೌಸಿಂಗ್ ಸೊಸೈಟಿಗೆ ಯಲ್ಲಿಸದಸ್ಯನಾಗಿದ್ದೇನೆ. ಸದರಿ ಅಗ್ರಿಮೆಂಟ್ ಹೂಗಾರ ಟೀಚರ್ ರವರ , ಮಹಾಂತಪ್ಪ ಹೊಸಮನಿ ಅಧ್ಯಕ್ಷರು , ಹಾಗೂ ಕೆಲವರು ಸದಸ್ಯರು ಸಹಿ ಮಾಡಿದ್ದರು. ಭಚೂ ಮಾಲೀಕರ ಪೈಕಿ ಎಷ್ಟು ಜನ ಸಹಿ ಮಾಡಿದ್ದರು ಎಂದರೆ ಹೇಳಲು ಗೊತ್ತಿಲ್ಲ. ಭೂಮಾಲೀಕರು ಎಷ್ಟು ಮಂದಿ ಇದ್ದರು ಎಂದರೆ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಬೆನಕಟ್ಟಿ ವಕೀಲರು

ಮಾಡಿಕೊಟ್ಟಿದ್ದರು ಎಂದು ಮಾತ್ರ ಗೊತ್ತು . ಸದರಿ ಅಗ್ರಿಮೆಂಟ್ ಫಾರ್ ಸೇಲ್ ನ್ನು ನಾನು ನೋಡಿಲ್ಲ. ಈಗಲೂ ನಾನು ಕೂಡ ಸದರಿ ಸೊಸೈಟಿಯ ಸದಸ್ಯನಾಗಿದ್ದೇನೆ. ಸದರಿ ಸೊಸೈಟಿ ಹಾಗೂ ಬೆನಕಟ್ಟಿರವರ ನಡುವೆ ವಿವಾದ ಯಾವ ವರ್ಷದಿಂದ ಇತ್ತು ಎಂದು ಕೇಳಿದರೆ ಕರಾರು ಆದ ನತಂರ ವಿವಾದ ಉಂಟಾಗಿದ್ದು ಹಾಗೂ ನಂತರ ಬೆನಕಟ್ಟಿರವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಾಗಿ ವಿವಾದ ಉಲ್ಬಣಗೊಂಡಿತ್ತು ಎಂದು ನುಡಿಯುತ್ತೇನೆ. ಆ ಬಗ್ಗೆ ಸೊಸೈಟಿದವರು ಬೆನಕಟ್ಟಿ ವಿರುದ್ಧ ಕೇಸ್ ಹಾಕಿದ್ದರು. ಅದರ ನಂಬರ ಗೊತ್ತಿಲ್ಲ. ಆ ಕೇಸಿನಲ್ಲಿ ಸೊಸೈಟಿ ವಿರುದ್ಧ ತೀರ್ಪು ಬಂದಿತ್ತು ಎಂದರೆ ನಿಜ. ಅದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿತ್ತೇ ಎಂದರೆ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಸದರಿ ವಿವಾದವನ್ನು ರಾಜೀ ಮೂಲಕ ಬಗೆಹರಿಸಲು ಜಯಪ್ರಕಾಶ ಟೆಂಗಿನಕಾಯಿರವರು ಮತ್ತು ಬೆನಕಟ್ಟಿರವರನ್ನು ನಮ್ಮ ಸೊಸೈಟಿ ಕರೆದುಕೊಂಡು ರಾಜೀ ಮಾಡಲು ಹೋಗಿದ್ದರು.

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ದಲ್ಲಿ ಹೇಳಿರುವ ನಾಗಪ್ಪ ಟೆಂಗಿನಕಾಯಿರವರು ಜಯಪ್ರಕಾರ ಟೆಂಗಿನಕಾಯಿರವರ ಅಂಕಲ್ ಆಗಿರುತ್ತಾರೆ. ಅವರಿಗೂ ಹಾಗೂ ಬೆನಕಟ್ಟಿರವರಿಗೂ ಮತ್ತು ಸೊಸೈಟಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಂಬಂಧ ಏನೂ ಇಲ್ಲ ಆದರೆ ಹಿರಿಯರಾಗಿದ್ದರಿಂದ ಅವರನ್ನು ಕರೆದುಕೊಂಡು ಹೋಗಿದ್ದು ಎಂದು ನುಡಿಯುತ್ತೇನೆ. **1994** ಏಪ್ರಿಲ್ ನಲ್ಲಿ ಆ ರೀತಿ ರಾಜೀ ಮಾತುಕೆತೆಗೆ ಪ್ರಯತ್ನಪಡಲಾಗಿತ್ತು. ಆವತ್ತು ಏನು ಮಾತುಕತೆಯಾಯಿತು ಎಂದರೆ ಕನಿಷ್ಠ ಅರ್ಧ ಭಾಗದಷ್ಟು ಆದರೂ ಜಮೀನು ಸೊಸೈಟಿಗೆ ಕೊಡಿ ಎಂದು ಕೇಳಲಾಗಿತ್ತು ಆದರೆ ಬೆನಕಟ್ಟಿರವರು ಒಪ್ಪಲಿಲ್ಲ ಎಂದು ನುಡಿಯುತ್ತೇನೆ.

ಸಾಕ್ಷಿ ಹೇಳಲು ಬರಬೇಕು ಎಂದು ನ್ಯಾಯಾಲಯದಿಂದ ಸವನ್ಸ ಬಂದಿದೆಯೇ ಎಂದು ಕೇಳಿದರೆ ಖುದ್ದು ಸಮನ್ಸ ತಂದು ಕೊಟ್ಟಿದ್ದರು ಎಂದು ನುಡಿಯುತ್ತೇನೆ. ಈ ದಾವೆಯನ್ನು ವಾದಿ ಎಷ್ಟು ವಿಸ್ತೀರ್ಣದ ಆಸ್ತಿ ಮೇಲೆ ಸಲ್ಲಿಸಿದ್ದಾರೆ ಎಂದರೆ **4** ಅಥವಾ **5** ಎಕರೆ ಕುರಿತು ಸಲ್ಲಿಸಿದ್ದಾರೆ, ಅಲ್ಲಿರುವ ಪೂರ್ತಿ ಜಮೀನಿನ ಕುರಿತು ಸಲ್ಲಿಸಿದ್ದು ಎಂದು ನುಡಿಯುತ್ತೇನೆ. ಆ ಜಮೀನಿನ ನಂಬರ ಹೇಳಲು ಗೊತ್ತಿಲ್ಲ. ಯಾವ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರಪಡಿಸಲಾಗಿದೆ ಎಂದು ಹೇಳಲು ಗೊತ್ತಿಲ್ಲ. ಖರೀದಿ ಸಂಚಕಾರ ಪತ್ರಕ್ಕೆ

ನಾನು ಸಾಕ್ಷಿದಾರನಲ್ಲ. ಖರೀದಿ ಸಂಚಕಾರ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿ ನೋಡಿಲ್ಲ. ಆ ರೀತಿ ರಾಜೀ ಮಾತುಕತೆ ಮಾಡಬೇಕೆಂದು ಮತ್ತು ನಾಗಪ್ಪ ಟೆಂಗಿನಕಾಯಿ ರವರನ್ನು ಅದಕ್ಕೆ ಕರೆಸಬೇಕೆಂದು ಸೊಸೈಟಿರವರು ತೀರ್ಮಾನಿಸಿದ್ದರು. ಸದರಿ ಸೊಸೈಟಿಯ ಆಸ್ತಿ ಸದರಿ ಸಂಚಕಾರ ಪತ್ರದ ಸಮಯ ಎಲ್ಲಿತ್ತು ಎಂದು ಕೇಳಿದರೆ ಖರೀದಿ ಹಿಡಿಯಲು ಉದ್ದೇಶ ಹೊಂದಿದ್ದ ಜಮೀನನ್ನು ಹೊರತು ಬೇರೆ ಜಮೀನು ಸದರಿ ಸೊಸೈಟಿಗೆ ವಿಜಯನಗರದಲ್ಲಿ ಇತ್ತು ಎಂದು ನುಡಿಯುತ್ತೇನೆ. ಸದರಿ ವಿಜಯನಗರದಲ್ಲಿರುವ ಸ್ವತ್ತಿನ ಕುರಿತಾದ ಬೈಲಾ ಹಾಗೂ ರೇಣುಕಾ ನಗರದಲ್ಲಿ ಖರೀದಿ ಹಿಡಿಯಲು ಉದ್ದೇಶ ಹೊಂದಿದ್ದ ಜಮೀನಿನ ಕುರಿತಾದ ಸೊಸೈಟಿಯ ಬೈಲಾ ಬೇರೆ ಬೇರೆ ಇದೆ ಎಂದರೆ ನನಗೆ ಗೊತ್ತಿಲ್ಲ. ರೇಣುಕಾನಗರದಲ್ಲಿ ಮಾಡಲು ಉದ್ದೇಶಿಸಿದ ಬಡಾವಣೆಯಲ್ಲಿ ನನಗೆ ಒಂದು ನಿವೇಶನ ಬೇಕು ಎಂದು ಅರ್ಜಿಯನ್ನು ನಾನು ಸೊಸೈಟಿಗೆ ಸಲ್ಲಿಸಿದ್ದೆ. ಜ್ಯೋತಿಬಾಯಿ ಬೆನಕಟ್ಟಿ, ಅಥವಾ ಅವರ ತಾಯಿ ಸಹೋದರ ಸಹೋದರಿಯರು ಯಾರಗೂ ಕೂಡ ಸದರಿ ಸೊಸೈಟಿಗೆ ಯಾವುದೇ ಅಗ್ರೀಮೆಂಟ್ ಬರೆದುಕೊಟ್ಟಿಲ್ಲ ಎಂದರೆ ಆ ರೀತಿ ಹೇಳಲು ಗೊತ್ತಿಲ್ಲ, ನನಗೆ ಗೊತ್ತಿರುವ ಪ್ರಕಾರ ಬೆನಕಟ್ಟಿರವರ ಜೊತೆ ಅಗ್ರೀಮೆಂಟ್ ಆಗಿದೆ ಎಂದು ಸೊಸೈಟಿಯ ವ್ಯಕ್ತಿಗಳು ನನಗೆ ಹೇಳಿರುವ ಬಗ್ಗೆ ಮಾತ್ರ ಗೊತ್ತಿರುವುದು ಎಂದು ನುಡಿಯುತ್ತೇನೆ. ಜ್ಯೋತಿಬಾಯಿ ಬೆನಕಟ್ಟಿರವರು ಸೊಸೈಟಿಗೆ ಮೋಸ ಮಾಡಿದ್ದಾರೆಂದು ಆಪಾದಿಸಿರುವ ಕುರಿತಂತೆ ಆ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ನಮ್ಮ ಸೊಸೈಟಿಗೆ ಕರಾರು ಪತ್ರ ಮಾಡಿಕೊಟ್ಟಿದ್ದರು ನಂತರ ಟೆಂಗಿನಕಾಯಿರವರು ಕರಾರು ಪತ್ರ ಮಾಡಿಕೊಟ್ಟಿದ್ದರು ನಂತರ ಬೇರೆಯವರಿಗೆ ಕರಾರು ಪತ್ರ ಮಾಡಿಕೊಟ್ಟಿದ್ದಾರೆಂದು ಟೆಂಗಿನಕಾಯಿರವರು ಹೇಳಿದ ಮೇರೆಗೆ ಗೊತ್ತಾಗಿದೆ ಎಂದು ನುಡಿಯುತ್ತೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಕೀಲರು ಹೇಳಿ ಬರೆಸಿದ ಮೇರೆಗೆ ನಾನು ಸಹಿ ಮಾಡಿರುವುದು ಎಂದರೆ ಸರಿಯಲ್ಲ. ನಾಗಪ್ಪ ಟೆಂಗಿನಕಾಯಿರವರ ಮನೆಯಲ್ಲಿ ಆಗಿದ್ದ ಮೀಟಿಂಗ್ ಗೆ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಆವತ್ತು ಸೊಸೈಟಿ ಕಡೆಯಿಂದ **7-8** ಜನ ಬಂದಿದ್ದರು

ಹಾಗೂ ನಾನು ನನ್ನ ಮನೆಯ ಪಕ್ಕವೇ ಮಿಟಿಂಗ್ ಆಗುತ್ತಿದ್ದ ಕಾರಣ ಹೋಗಿದ್ದೆ. ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಸೊಸೈಟಿರವರು ಬೆನಕಟ್ಟಿರವರ ವಿರುದ್ಧ ಒಂದು ಕೇಸ್ ಸಲ್ಲಿಸಿದ್ದರು ಹಾಗೂ ಅದು ವಜಾ ಆಗಿದೆ.

<u>ಪಾಟಿ ಸವಾಲು **13** ನೇ **ಪ್ರತಿವಾದಿ** ಪರ ಶ್ರೀಮತಿ. ಜೆ ಪಿ ಟಿ ವಕೀಲರಿಂದಃ</u>

ನಾನು ಬಿ.ಇ., ಪದವಿಧರನಾಗಿದ್ದೇನೆ. ನಾನು ಕನ್ಸಲ್ಟಿಂಗ್ ಇಂಜಿನಿಯರ್ ಆಗಿ ಸ್ವಂತ ನೆಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಈ ದಾವೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆಯೇ ಎಂದು ಕೇಳಿದರೆ ಸಂಪೂರ್ಣ ಮಾಹಿತಿ ಇಲ್ಲ ಎಂದು ನುಡಿಯುತ್ತೇನೆ. ನಾಗಪ್ಪ ಟೆಂಗಿನಕಾಯಿರವರು ನನಗೆ ಬಹಳ ಬೇಕಾದವರು ಆಗಿದ್ದರು ಎಂದರೆ ನಮ್ಮ ಪಕ್ಕದ ಮನೆಯವರಾಗಿದ್ದರು ಎಂದು ನುಡಿಯುತ್ತೇನೆ. ಜಯಪ್ರಕಾಶ ಟೆಂಗಿನಕಾಯಿರವರು ಸದರಿ ನಾಗಪ್ಪ ಟೆಂಗಿನಕಾಯಿರವರ ಪಕ್ಕದ ಮನೆಯವರಾದ್ದಗಿರು. ನನಗೆ ಕಲ್ಯಾಣಶೆಟ್ಟಿ ಕುಟುಂಬದ ಬಗ್ಗೆ ಗೊತ್ತಿಲ್ಲ. ಅಧ್ಯಾಪಕ ಹೌಸಿಂಗ್ ಸೊಸೈಟಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. 1985 ರಲ್ಲಿ ನಾನು ಅದಕ್ಕೆ ಸದಸ್ಯನಾಗಿದ್ದೆ ಹಾಗೂ ಅದಕ್ಕೂ ಮೊದಲೇ ಅದು ಸ್ಥಾಪನೆಯಾಗಿತ್ತು. ಜಾಗ ಖರೀದಿ ಹಿಡಿದು ಟೀಚರ್ಸ ಹಾಗೂ ಇತರರಿಗೆ ಪ್ಲಾಟ್ ಮಾಡಿಕೊಡಲು ಅದನ್ನು ಮಾಡಿದ್ದರು. ಅಧ್ಯಾಪಕ ನಗರ ಎಂದರೆ ರೇಣುಕಾ ನಗರದಲ್ಲಿ ಅವರು ಆ ಹೊತ್ತಿಗೆ ಬಡಾವಣೆ ನಿರ್ಮಾಣ ಮಾಡಿ ಆಗಿತ್ತು ಹಾಗೂ ರೇಣುಕಾ ನಗರದಲ್ಲಿ ಬಡಾವಣೆ ನಿರ್ಮಾಣ ಮಾಡುತ್ತಾರೆ ಎಂದು ಗೊತ್ತಾದ ಮೇರೆಗೆ ನಾನು ಸದಸ್ಯನಾಗಲು ಅರ್ಜಿ ಸಲ್ಲಿಸಿದ್ದೆ. ದಾಖಲೆ ನೋಡಿದ ನಂತರ ಸದಸ್ಯ ಆಗಿರುವುದೇ ಎಂದು ಕೇಳಿದರೆ ಮೌಖಿಕವಾಗಿ ಮಾಹಿತಿಬಂದ ಮೇರೆಗೆ ಸದಸ್ಯ ಆಗಿದ್ದು ಎಂದು ನುಡಿಯುತ್ತೇನೆ. ಕೇವಲ ಅಗ್ರೀಮೆಂಟ್ ಮಾತ್ರ ಆ ಸಮಯ ಮಾಡಿದ್ದರು. ಆ ಅಗ್ರೀಮೆಂಟ್ ನೊಂದಣ ಆಗಿತ್ತು ಎಂದು ಹೇಳಲು ಗೊತ್ತಿಲ್ಲ. ಯಾವ ಕಾರಣದಿಂದ ಅಗ್ರೀಮೆಂಟ್ ರದ್ದಾಗಿದ್ದು ಎಂದರೆ ಮತ್ತೊಬ್ಬರಿಗೆ ಅಂದರೆ ಜಯಪ್ರಕಾಶ ಟೆಂಗಿನಕಾಯಿರವರಿಗೆ ಮಾರಾಟಕ್ಕೆ ಅಗ್ರೀಮೆಂಟ್ ಮಾಡಿದ ಕಾರಣದಿಂದ ಎಂದು ನುಡಿಯುತ್ತೇನೆ. ಯಾವ ವರ್ಷ ಸದರಿ ಅಗ್ರೀಮೆಂಟ್

ಆಗಿದ್ದು ಎಂದು ಹೇಳಲು ಗೊತ್ತಿಲ್ಲ. 1990 ಕ್ಕಿಂತ ಮೊದಲೇ ಸೊಸೈಟಿರವರು ಬೆನಕಟ್ಟಿರವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆ ನಿರ್ಣಯಕ್ಕೆ ಬಾಕಿ ಇರುವಾಗ ಬೆನಕಟ್ಟಿರವರು ಜಯಪ್ರಕಾಶ ಟೆಂಗಿನಕಾಯಿರವರೊಂದಿಗೆ ಸಂಚಕಾರ ಪತ್ರ ಮಾಡಿಕೊಂಡಿದ್ದು ಎಂದು ನುಡಿಯುತ್ತೇನೆ. ಸದರಿ ದಾವೆ ವಜಾ ಆಗಿ ಮೇಲ್ಮನವಿಯಲ್ಲಿ ತಡೆಯಾಜ್ಞೆ ಇದ್ದಾಗ ಜಯಪ್ರಕಾಶ ಟೆಂಗಿನಕಾಯಿರವರಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದು ಎಂದರೆ ನನಗೆ ಗೊತ್ತಿಲ್ಲ. ಅವಾಗ ದಾವಾ ಆಸ್ತಿ ಶೇತ್ಕಿ ಜಮೀನಾಗಿತ್ತು ಎಂದರೆ ನಿಜ. 1993-94 ರಲ್ಲಿ ಖರೀದಿದಾರನಿಗೂ ಶೇತ್ಕಿ ಜಮೀನು ಇದ್ದರೇ ಮಾತ್ರ ಶೇತ್ಕಿ ಜಮೀನು ಖರೀದಿ ಮಾಡಲು ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಶೇತ್ಕಿ ಜಮೀನು ಹೊಂದಿಲ್ಲದವರು ಶೇತ್ಕಿ ಜಮೀನು ಖರೀದಿ ಹಿಡಿಯಬೇಕಾದರೆ ಜಿಲ್ಲಾಧಿಕಾರಿಯವರ ಪೂರ್ವಾನುಮತಿ ಪಡೆಯಬೇಕಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಒಟ್ಟು ಎಷ್ಟು ಮಂದಿ ಮಾಲೀಕರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಕೋರ್ಟಿನ ಆದೇಶ ಉಲ್ಲಂಘಿ ಸಿ ತಡೆಯಾಜ್ಞೆ ಇದ್ದರೂ ಕೂಡ ಖರೀದಿ ಪತ್ರ ಬರೆದುಕೊಟ್ಟಿದ್ದು ಎಂದರೆ ನಿಜ. ನಾನು ಸದರಿ ಸೊಸೈಟಿಯ ಆಡಳಿತ ಮಂಡಳಿಯಲ್ಲಿ ಇರಲಿಲ್ಲ ಎಂದರೆ ನಿಜ. ಎಲ್ಲ ಸದಸ್ಯರುಗಳಿಗೆ ಒಪ್ಪಂದದ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ನನಗೆ ತಿಳಿಸಿದ್ದರು ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಇಂಜೀನಿಯರ್ ಆಗಿರುವುದರಿಂದ ನನ್ನನ್ನು ಸ್ಥಳಕ್ಕೆ ಕರೆದುಕೊಂಡ ಹೋಗಿ ತೋರಿಸಿ ತಿಳಿಸಿದ್ದರು. ಕೋರ್ಟಿನಲ್ಲಿ ದಾವೆಯಲ್ಲಿ ಸೋತ ನಂತರ ನಾವು ರಾಜೀಗೆ ಹೋಗಿದ್ದು ಎಂದರೇ ಅದಕ್ಕೂ ಮೊದಲೇ ರಾಜೀ ಮಾತುಕತೆ ಮಾಡಲಾಗಿತ್ತು ಎಂದು ನುಡಿಯುತ್ತೇನೆ. ರಾಜೀ ಮಾತನಾಡಲು ಹೋಗುವ ಮೊದಲು ಜಯಪ್ರಕಾಶ ಟೆಂಗಿನಕಾಯಿರವರ ಜೊತೆ ಮಾಡಿಕೊಂಡಿದ್ದ ಸಂಚಕಾರ ಪತ್ರವನ್ನು ನಾನು ನೋಡಿಲ್ಲ. ಎಲ್ಲ ಮಾಲೀಕರ ಸಹಿ ಸಂಚಕಾರ ಪತ್ರದಲ್ಲಿ ಇದೆಯೇ ಎಂದು ನಾನು ನೋಡಿಲ್ಲ. ಬೆನಕಟ್ಟಿರವರು ಸೊಸೈಟಿಗೆ ಮಾಡಿಕೊಟ್ಟಿರುವ ಸಂಚಕಾರ ಪತ್ರದ ಶರತ್ತುಗಳನ್ನು ನಾನು ಓದಿ ನೋಡಿಲ್ಲ. ಬೆನಕಟ್ಟಿರವರು ಟೆಂಗಿನಕಯಿರವರ ಮಾಡಿಕೊಟ್ಟಿರವ ಸಂಚಕಾರ ಪತ್ರದ ಶರತ್ತುಗಳನ್ನು ನಾನು ಓದಿ ನೋಡಿಲ್ಲ. ನಮ್ಮ ಸೊಸೈಟಿ ಸಲ್ಲಿಸಿದ್ದ ಮೇಲ್ಮನವಿ ವಜಾ ಆಗಿದೆ ಎಂದರೆ ನಿಜ. ಜ್ಯೋತಿಬಾ ಬೆನಕಟ್ಟಿರವರು ಕಲ್ಯಾಣಶೆಟ್ಟಿರವರಿಗೆ

ಕಾನೂನುಬದ್ಧ ಸಂಚಕಾರ ಪತ್ರ ಮಾಡಿಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದು ನೊಂದ ಆಗಿದೆಯೇ ಎಂದರೆ ಗೊತ್ತಿಲ್ಲ. 1994 ಎಪ್ರಿಲ್ ನಲ್ಲಿ ಬೆನಕಟ್ಟಿರವರು ಜಯಪ್ರಕಾಶ ಟೆಂಗಿನಕಾಯಿರವರಿಗೆ ಸಂಚಕಾರ ಪತ್ರ ಮಾಡಿಕೊಟ್ಟಿದ್ದರು. ಅದು ನೊಂದಾಯಿತ ದಾಖಲೆ ಅಲ್ಲವಾದ್ದರಿಂದ ಋಣಭಾರ ಪತ್ರ ದಲ್ಲಿ ಅದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜಯಪ್ರಕಾಶ ಟೆಂಗಿನಕಾಯಿರವರ ಯಾವ ವರ್ಷದಲ್ಲಿ ಕೇಸ್ ಸಲ್ಲಿಸಿದ್ದು ಎಂದರೆ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮತ್ತೊಬ್ಬರಿಗೆ ಮಾರಾಟ ಆದ ನಂತರ ಕೇಸ್ ಹಾಕಿದ್ದರು ಎಂದು ಮಾತ್ರ ಗೊತ್ತು. ಜಯಪ್ರಕಾಶ ಟೆಂಗಿನಕಾಯಿರವರು ಶೇತ್ಕಿ ಜಮೀನು ಹೊಂದಿರಲಿಲ್ಲವಾದ್ದರಿಂದ ಶೇತ್ಕಿ ಜಮೀನು ಖರೀದಿ ಮಾಡಲು ಅವರಿಗೆ ಅರ್ಹತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಂಚಕಾರ ಪತ್ರ ಮಾಡಿಕೊಂಡ 7 ವರ್ಷದ ನಂತರ ಅವರು ಕೇಸ್ ಸಲ್ಲಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇಲ್ಲವಾದರೂ ಕೂಡ ಸಾಕ್ಷಿ ಹೇಳಲು ಬಂದಿರುವುದು ಎಂದರೆ ಸರಿಯಲ್ಲ. ಬೆನಕಟ್ಟಿರವರು ಸೊಸೈಟಿಗೆ ಮೋಸ ಮಾಡಿದ್ದಾರೆ ಹಾಗೂ ನಂತರ ಅರ್ಧ ಭಾಗದಷ್ಟು ಜಮೀನು ಕೊಡು ಎಂದರೂ ಕೊಡಲಿಲ್ಲ ಹಾಗೂ ನಂತರ ಟೆಂಗಿನಕಾಯಿರವರಿಗೂ ಸಂಚಕಾರ ಪತ್ರ ಮಾಡಿಕೊಟ್ಟು ನಂತರ ಖರೀದಿ ಪತ್ರ ಬರೆದು ಕೊಡದೇ ಮೋಸ ಮಾಡಿದ್ದಾರೆ ಹಾಗೂ ಆ ಕಾರಣದಿಂದ ಸಾಕ್ಷಿ ಹೇಳಲು ಬಂದಿದ್ದೇನೆ. ಅಧ್ಯಾಪಕರ ಹೌಸಿಂಗ್ ಸೊಸೈಟಿ ಕೇಸ್ ಸಲ್ಲಿಸಿ ಅದರಲ್ಲಿ ಸೋತಿದ್ದಾರೆ ಎಂದರೆ ನಿಜ. ಸೊಸೈಟಿ ಸಲ್ಲಿಸಿದ ಕೇಸ್ ಉತ್ತಮವಾಗಿದ್ದರೆ ಕೇಸಿನಲ್ಲಿ ಗೆಲುವು ಸಿಗುತ್ತಿತ್ತು ಎಂದರೆ ಸರಿಯಲ್ಲ. ಬೆನಕಟ್ಟಿರವರು ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಬೆನಕಟ್ಟಿರವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ಸಂಪೂರ್ಣ ಮಾಹಿತಿ ಇಲ್ಲದೇ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಟೆಂಗಿನಕಾಯಿರವರು ತನಗೆ ಅನ್ಯಾಯ ಆಗಿದ್ದರೆ ಕಾಲಮಿತಿಯೊಳಗಡೆ ಕೇಸ್ ದಾಖಲಿಸುತ್ತಿದ್ದರು ಎಂದರೆ ಸರಿಯಲ್ಲ. ಅವರು ಸಾಲದ ವ್ಯವಹಾರದ ಭದ್ರತೆಗೆ ಒಂದು ದಾಖಲೆ ಇಟ್ಟುಕೊಂಡಿದ್ದು ಹೊರತು ಬೇರೆ ಯಾವುದೇ ವ್ಯವಹಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ಬೆನಕಟ್ಟಿರವರು ಟೆಂಗಿನಕಾಯಿರವರಿಗೆ ಯಾವುದೇ ಮೋಸ ಮಾಡಿಲ್ಲವಾದರೂ

ಕೂಡ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ಈ ದಾವೆಗೂ ಹಾಗೂ ಅಧ್ಯಾಪಕ ಹೌಸಿಂಗ್ ಸೊಸೈಟಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.